



ಚಿತ್ರ: ೬೪


ಸ್ಟುಡಿಯೋದಲ್ಲಿಯೇ ಎಂದು ನಂಬಲಾಗಿದೆ. ಹಿಂದಿನ ಚಿತ್ರಕ್ಕೂ ಈ ಚಿತ್ರಕ್ಕೂ ಇರುವ ಒಂದೇ ವ್ಯತ್ಯಾಸವೆಂದರೆ, ಇದರಲ್ಲಿ ಸ್ವಾಮೀಜಿ ತಲೆಗೆ ಪೇಟಾ ಸುತ್ತಿದ್ದಾರೆ. ಗೋಪಾಲ ಲಾಲ ಸೀಲರ ಉದ್ಯಾನಗೃಹದಲ್ಲಿದ್ದಾಗ ಪ್ರಾಣಾಯಾಮದ ಬಗ್ಗೆ ಕೆಲವರು ತಿಳಿದುಕೊಳ್ಳಲು ಬಂದಿದ್ದರು. ಪ್ರಾಣಾಯಾಮ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಧ್ಯಾಹ್ನ ಮೂರು ಗಂಟೆಯಿಂದ ಸಂಜೆ ಏಳು ಗಂಟೆಯವರೆಗೆ ಸ್ವಾಮೀಜಿ ನಿರರ್ಗಳವಾಗಿ ಮಾತನಾಡಿದರು. ಅವರು ಆಡುತ್ತಿದ್ದ ಮಾತುಗಳು ಅವರ ಅನುಭವದಿಂದಲೇ ಒಡಮೂಡುತ್ತಿದ್ದುದು ಸ್ಪಷ್ಟವಾಗಿತ್ತು. ಅದಲ್ಲದೆ, ಸಂದರ್ಶಕರ ಮನಸ್ಸಿನಲ್ಲಿ ಉತ್ಪನ್ನವಾಗುತ್ತಿದ್ದ ಪ್ರಶ್ನೆಗಳಿಗೆ ಸ್ವಾಮೀಜಿ ತಾವಾಗಿಯೇ ಉತ್ತರ ಹೇಳುತ್ತಿದ್ದರು. ತಮ್ಮ ಮನಸ್ಸಿನಲ್ಲಿದ್ದ ಪ್ರಶ್ನೆಗಳನ್ನು ಸ್ವಾಮೀಜಿ ಹೇಗೆ ಅರಿತುಕೊಂಡರು ಎನ್ನುವುದು ಸಂದರ್ಶಕರಿಗೆ ಆಶ್ಚರ್ಯಕರವಾದ ಸಂಗತಿಯಾಗಿ ಪರಿಣಮಿಸಿತು.

**ಛಾಯಾಚಿತ್ರ ೬೬ :** ಈ ಚಿತ್ರ ತೆಗೆದಿದ್ದು ೧೮೯೭ರಲ್ಲಿ, ಕೊಲ್ಕತಾದಲ್ಲಿ. ಸ್ವಾಮೀಜಿ ವಿದೇಶದಿಂದ ಬಂದಮೇಲೆ ಕೇಶ ಮುಂಡನ ಮಾಡಿಕೊಂಡರು. ಇದು ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಈ ಚಿತ್ರದ ಪ್ರತಿಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಜಾಹೀರಾತುಗಳು 'ಬಂಗಾಳಿ', 'ಸ್ಟೇಟ್‌ಮನ್' ಮತ್ತು 'ಫ್ರೆಂಡ್ ಆಫ್ ಇಂಡಿಯಾ' ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಈ ಚಿತ್ರದಲ್ಲಿ ಸ್ವಾಮೀಜಿ ಒಂದು ಉದ್ದ ವಸ್ತ್ರವನ್ನು ಮತ್ತು ಮದ್ರಾಸಿ ಶೈಲಿಯ ಪಗಡಿಯನ್ನು ಧರಿಸಿದ್ದಾರೆ.



ಚಿತ್ರ: ೬೫



ಚಿತ್ರ: ೬೬